(8)

**ಮಾನ್ಯ ವಿಧಾನಪರಿಷತ್ ಸದಸ್ಯರಾದ ಡಾ.ತಳವಾರ ಸಾಬಣ್ಣ ಇವರು ನಿಯಮ 72 ರ ಮೇರೆಗೆ ಗಮನ ಸೆಳೆದ ಸೂಚನೆಗೆ ಉತ್ತರಿಸುವ ಬಗ್ಗೆ.**

**ವಿಷಯ:**

ಕರ್ನಾಟಕ ರಾಜ್ಯದಲ್ಲಿ 41,905 ಸರ್ಕಾರಿ ಪ್ರಾಥಮಿಕ ಮತ್ತು 4850 ಪ್ರೌಢ ಶಾಲೆಗಳು ಸೇರಿದಂತೆ ಒಟ್ಟು 46,755 ಸರ್ಕಾರಿ ಶಾಲೆಗಳಿವೆ. ಸರ್ಕಾರಿ ಶಾಲೆಗಳಲ್ಲಿ ಗ್ರಾಮೀಣ/ನಗರ ಪ್ರದೇಶದ ಲಕ್ಷಾಂತರ ಬಡವರ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ದುರಾದೃಷ್ಟವಶಾತ್ ಇಂತ ಸರ್ಕಾರಿ ಶಾಲೆಗಳ 21 ಸಾವಿರ ಕೊಠಡಿಗಳು ಅಪಾಯದ ಅಂಚಿನಲ್ಲಿವೆ. ಇದರಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಅತಿ ಹೆಚ್ಚು 5,700 ಶಾಲಾ ಕೊಠಡಿಗರು ಶಿಥಿಲಗೊಂಡು ದುಸ್ಥಿತಿಯಲ್ಲಿದೆ ಎಂಬುದು ಶೋಚನೀಯ ಸ್ಥಿತಿ. ಮಳೆಗಾಲದಲ್ಲಿ ಚಿಕ್ಕ ಮಕ್ಕಳು ಮತ್ತು ಶಿಕ್ಷಕರು ಜೀವ ಕೈಯಲ್ಲಿ ಹಿಡಿದು ತರಗತಿಗಳಿಗೆ ಹಾಜರಾಗುತ್ತಿರುವುದನ್ನು ಕಾಣುತ್ತೇವೆ. ಪ್ರತಿ ವರ್ಷ ಸರ್ಕಾರ ದುರಸ್ತಿಗೆಂದು ಕೊಡುವ ಹಣ ಯಾವ ಲೆಕ್ಕಕ್ಕೂ ಸರಿಯಾಗುವುದಿಲ್ಲಾ. ಸರ್ಕಾರಿ ಶಾಲೆಗಳ ದುಸ್ಥಿತಿಗೆ ಕಳಪೆ ಕಾಮಗಾರಿ ಮತ್ತು ಭ್ರಷ್ಟಾಚಾರ ಕಾರಣವೆಂದು ಜನರು ನೇರವಾಗಿ ದೂರುತ್ತಿದ್ದಾರೆ.

ಬಡವರ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಬೇಕಾದರೆ ರಾಜ್ಯದಲ್ಲಿ ಅಪಾಯದ ಸ್ಥಿತಿಯಲ್ಲಿರುವ 21 ಸಾವಿರ ಸರ್ಕಾರಿ ಶಾಲೆ ಕೊಠಡಿಗಳ ಸುಧಾರಣೆ ಆಗಬೇಕು. ಕಳಪೆ ಕಾಮಗಾರಿಗಳಿಗೆ ತಡೆಯೊಡ್ಡಿ, 21 ಸಾವಿರ ಶಾಲಾ ಕೊಠಡಿಗಳಿಗೆ ಸುಧಾರಣೆ ಮಾಡಲು ಹೆಚ್ಚಿನ ಅನುದಾನ ನೀಡಿ ಬಡವರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಮಂತ್ರಿಯವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ಸರ್ಕಾರಿ ಶಾಲಾ ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ರಾಜ್ಯವಲಯ ಮುಂದುವರೆದ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡಂತೆ ಅನುದಾನ ಮಂಜೂರಾಗಿರುತ್ತದೆ.

- 2022-23ನೇ ಸಾಲಿಗೆ 1878 ಸರ್ಕಾರಿ ಶಾಲೆಗಳಲ್ಲಿನ 3620 ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ ರೂ.4850.00ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ.
- 2023-24ನೇ ಸಾಲಿಗೆ 2162 ಸರ್ಕಾರಿ ಶಾಲೆಗಳಲ್ಲಿನ 7342 ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ ರೂ.7000.00ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ.
- 2024-25ನೇ ಸಾಲಿಗೆ 5744 ಸರ್ಕಾರಿ ಶಾಲೆಗಳಲ್ಲಿನ 13880 ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ ರೂ.15129.66 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ. ಹಾಗೂ SCP/TSP ಯೋಜನೆಯಡಿ 94 ಸರ್ಕಾರಿ ಶಾಲೆಗಳ 94 ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ ರೂ.170.00ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ.
- ಒಟ್ಟಾರೆಯಾಗಿ 2022-23ನೇ ಸಾಲಿನಿಂದ 2024-25ನೇ ಸಾಲಿನ ವರೆಗೆ ಸರ್ಕಾರಿ ಶಾಲಾ ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ 9878 ಸರ್ಕಾರಿ ಶಾಲೆಗಳಲ್ಲಿನ 24936 ಕೊಠಡಿಗಳ

ದುರಸ್ತಿ ಕಾಮಗಾರಿಗಳಿಗೆ ರೂ. 27149.66 ಲಕ್ಷಗಳ ಅನುದಾನ ಮಂಜೂರಾಗಿದ್ದು, ಬಿಡುಗಡೆಯಾಗಿರುತ್ತದೆ, ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದೆ.

- ಈ ಪೈಕಿ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳು ಸಹ ಒಳಗೊಂಡಿದ್ದು, 2023-24 ಮತ್ತು 2024-25 ನೇ ಸಾಲಿನಲ್ಲಿ ಒಟ್ಟು 1814 ಸರ್ಕಾರಿ ಶಾಲೆಗಳಲ್ಲಿನ 6384 ಕೊಠಡಿಗಳ ದುರಸ್ತಿ ಕಾಮಗಾರಿಗೆ ಒಟ್ಟು ರೂ.5915.57 ಲಕ್ಷಗಳ ಅನುದಾನ ಮಂಜೂರಾಗಿದ್ದು, ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದೆ. ವಿವರ ಈ ಕೆಳಕಂಡಂತಿದೆ.

| | | | | ರೂ.ಲಕ್ಷಗಳಲ್ಲಿ | |
|---|---|---|---|---|---|
| ಜಿಲ್ಲೆಯ ಹೆಸರು | ವರ್ಷ | ಶಾಲೆಗಳ ಸಂಖ್ಯೆ | ಕೊಠಡಿಗಳ ಸಂಖ್ಯೆ | ಮಂಜೂರಾದ ಅನುದಾನ | ಬಿಡುಗಡೆಯಾದ ಅನುದಾನ |
| ಬಳ್ಳಾರಿ | 2023-24 | 54 | 298 | 233.40 | 233.40 |
| | 2024-25 | 90 | 255 | 500.62 | 500.62 |
| | **ಒಟ್ಟು** | **144** | **553** | **734.02** | **734.02** |
| ವಿಜಯನಗರ | 2023-24 | 162 | 761 | 629.90 | 629.90 |
| | 2024-25 | 144 | 480 | 277.30 | 277.30 |
| | **ಒಟ್ಟು** | **306** | **1241** | **907.20** | **907.20** |
| ರಾಯಚೂರು | 2023-24 | 104 | 587 | 509.50 | 509.50 |
| | 2024-25 | 76 | 220 | 473.16 | 473.16 |
| | **ಒಟ್ಟು** | **180** | **807** | **982.66** | **982.66** |
| ಯಾದಗಿರಿ | 2023-24 | 73 | 262 | 280.10 | 280.10 |
| | 2024-25 | 42 | 94 | 188.29 | 188.29 |
| | **ಒಟ್ಟು** | **115** | **356** | **468.39** | **468.39** |
| ಬೀದರ್ | 2023-24 | 257 | 1074 | 579.40 | 579.40 |
| | 2024-25 | 65 | 375 | 277.42 | 277.42 |
| | **ಒಟ್ಟು** | **322** | **1449** | **856.82** | **856.82** |
| ಕೊಪ್ಪಳ | 2023-24 | 160 | 405 | 404.40 | 404.40 |
| | 2024-25 | 62 | 178 | 217.40 | 217.40 |
| | **ಒಟ್ಟು** | **222** | **583** | **621.80** | **621.80** |
| ಕಲಬುರ್ಗಿ | 2023-24 | 279 | 793 | 754.40 | 754.40 |
| | 2024-25 | 246 | 602 | 590.28 | 590.28 |
| | **ಒಟ್ಟು** | **525** | **1395** | **1344.68** | **1344.68** |
| **ಒಟ್ಟಾರೆ** | | **1814** | **6384** | **59145.57** | **5915.57** |

- ಕೆ.ಕೆ.ಆರ್.ಡಿ.ಬಿ ವತಿಯಿಂದ 2024-25ನೇ ಸಾಲಿನಲ್ಲಿ ಶಾಲಾ ಕೊಠಡಿಗಳ ದುರಸ್ತಿ ಕಾಮಗಾರಿಗೆ ರೂ.5284.74 ಲಕ್ಷಗಳ ಅನುದಾನ ಮಂಜೂರಾಗಿದ್ದು, ವಿವರ ಕೆಳಕಂಡಂತಿದೆ.

ರೂ.ಲಕ್ಷಗಳಲ್ಲಿ

| ಜಿಲ್ಲೆಗಳು | ಒಟ್ಟು ಕಾಮಗಾರಿ | ಪೂರ್ಣಗೊಂಡ ಕಾಮಗಾರಿ | ಚಾಲ್ತಿಯಿಲ್ಲಿರುವ ಕಾಮಗಾರಿ | ಒದಗಿಸಲಾದ ಅನುದಾನ |
|---|---|---|---|---|
| ಬಳ್ಳಾರಿ | 5 | 0 | 5 | 34.60 |
| ಬೀದರ್ | 4 | 0 | 4 | 72.00 |
| ಕಲಬುರ್ಗಿ | 50 | 0 | 50 | 1711.03 |
| ಕೊಪ್ಪಳ | 2 | 2 | 0 | 25.54 |
| ರಾಯಚೂರು | 2 | 0 | 2 | 252.00 |
| ವಿಜಯನಗರ | 2 | 0 | 2 | 12.15 |
| ಯಾದಗಿರಿ | 220 | 0 | 220 | 3177.42 |
| **ಒಟ್ಟಾರೆ** | **285** | **2** | **283** | **5284.74** |

2022-23 ರಿಂದ 2024-25ನೇ ಸಾಲಿನವರೆಗೆ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿನ ಸರ್ಕಾರಿ ಶಾಲೆಗಳಲ್ಲಿ ಹೊಸ ಕೊಠಡಿಗಳನ್ನು ನಿರ್ಮಾಣ ಮಾಡಲು **ರಾಜ್ಯವಲಯ ಮುಂದುವರೆದ ಯೋಜನೆಯಡಿ ಹಾಗೂ ವಿವೇಕಾ ಯೋಜನೆಯಡಿ** ಕೆಳಕಂಡಂತೆ ಅನುದಾನದ ಮಂಜೂರಾಗಿದ್ದು, ಬಿಡುಗಡೆಯಾಗಿರುತ್ತದೆ.

| ಜಿಲ್ಲೆಗಳು | ರೂ,ಲಕ್ಷಗಳಲ್ಲಿ | | |
|---|---|---|---|
| | ಒಟ್ಟು ಕೊಠಡಿಗಳು | ಒದಗಿಸಲಾದ ಅನುದಾನ | ಬಿಡುಗಡೆಯಾದ ಅನುದಾನ |
| ಬಳ್ಳಾರಿ | 141 | 1985.61 | 1798.42 |
| ಬೀದರ್ | 18 | 262.70 | 243.76 |
| ಕಲಬುರ್ಗಿ | 59 | 855.40 | 778.23 |
| ಕೊಪ್ಪಳ | 34 | 490.00 | 445.58 |
| ರಾಯಚೂರು | 84 | 1213.80 | 1184.70 |

| ವಿಜಯನಗರ | 141 | 2036.70 | 2016.83 |
|---|---|---|---|
| ಯಾದಗಿರಿ | 64 | 930.90 | 838.43 |
| **Total** | **541** | **7775.11** | **7305.95** |

- ಕೇಂದ್ರ ಪುರಸ್ಕೃತ ಯೋಜನೆಯಾದ ಸಮಗ್ರ ಶಿಕ್ಷಣ -ಕರ್ನಾಟಕ ಯೋಜನೆಯಡಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳ ಹಾಜರಾತಿಗೆ ಅನುಗುಣವಾಗಿ ಹಾಗೂ ಅವಶ್ಯವಿರುವ ಕೊಠಡಿಗಳ ನಿರ್ಮಾಣ/ದುರಸ್ತಿ/ಶೌಚಾಲಯಗಳ ನಿರ್ಮಾಣ ಮುಂತಾದವುಗಳ ಬಗ್ಗೆ ಸಂಬಂಧಪಟ್ಟ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಆಧರಿಸಿ ಮಂಜೂರಾದ/ಅನುಮೋದನೆಯಾದ ಕಾಮಗಾರಿಗಳಿಗೆ ಆಯಾ ಸಾಲಿನಲ್ಲಿ ಬಿಡುಗಡೆ ಆಗುವ ಅನುದಾನಕ್ಕೆ ಸೀಮಿತಗೊಳಿಸಿ PRED/PWD ಇಲಾಖೆ ವತಿಯಿಂದ ಕಾಮಗಾರಿಗಳನ್ನು ನಿರ್ಮಿಸಿ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗುತ್ತಿದೆ.(ಮಾಹಿತಿ ಮೂಲ ಸಮಗ್ರ ಶಿಕ್ಷಣ ಕರ್ನಾಟಕ)
- ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯವಲಯದ ಅನುದಾನದಲ್ಲಿ ಕಲ್ಯಾಣ ಕರ್ನಾಟಕ ವಿಭಾಗಕ್ಕೆ 2022-23 ರ ಸಾಲಿನಿಂದ 2024-25 ರ ಸಾಲಿನವರೆಗೆ ಈ ಕೆಳಕಂಡಂತೆ ಅನುದಾನ ಮಂಜೂರಾಗಿರುತ್ತದೆ.

| ಜಿಲ್ಲೆಯ ಹೆಸರು | ಮಂಜೂರಾದ ಅನುದಾನ | ಬಿಡುಗಡೆಯಾದ ಅನದಾನ |
|---|---|---|
| ಬಳ್ಳಾರಿ | 402.14 | 369.49 |
| ಬೀದರ್ | 339.06 | 295.55 |
| ಕಲಬುರ್ಗಿ | 1004.44 | 824.15 |
| ಕೊಪ್ಪಳ | 628.91 | 574.32 |
| ರಾಯಚೂರು | 761.62 | 715.24 |
| ವಿಜಯನಗರ | 1085.53 | 1000.45 |
| ಯಾದಗಿರಿ | 1030.08 | 905.96 |
| ಒಟ್ಟು | 5251.78 | 4685.16 |

ಯೋಜನಾವಾರು ಮತ್ತು ವರ್ಷವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ

- 2022-23ನೇ ಸಾಲಿನ, ಗಣಿಭಾದಿತ ಪ್ರದೇಶಗಳಲ್ಲಿ, ಗಣಿ ಪರಿಸರ ಪುನಃಶ್ಚೇತನ ಯೋಜನೆಗಳನ್ನು CEPMIZ ಯೋಜನೆಯಡಿ ಆಧ್ಯತೆ ಮೇರೆಗೆ ಅನುಷ್ಠಾನಗೊಳಿಸಲು ಬೇಕಾದ Priority Project ಗಳನ್ನು ಆಯ್ಕೆ ಮಾಡುವ ಕುರಿತು,ಕೆ.ಎಂ.ಇ.ಆರ್.ಸಿ ಕಛೇರಿಯಿಂದ ಗಣಿ ಭಾದಿತ ಪ್ರದೇಶವೆಂದು ಗುರುತಿಸಲಾದ 04 ಜಿಲ್ಲೆಗಳ ಪೈಕಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳೂ ಸಹ ಒಳಗೊಂಡಿದ್ದು ಈ ಜಿಲ್ಲೆಗಳ 03 ತಾಲ್ಲೂಕುಗಳಾದ ಬಳ್ಳಾರಿ, ಸಂಡೂರು, ಮತ್ತು ಹೊಸಪೇಟೆ ತಾಲ್ಲೂಕಗಳಲ್ಲಿ ತಾಲ್ಲೂಕಿಗೆ 10 ಶಾಲೆಗಳಂತೆ ಒಟ್ಟು 30 ಸರ್ಕಾರಿ ಶಾಲೆಗಳನ್ನು ಕೆ.ಪಿ.ಎಸ್ ಶಾಲೆಗಳಾಗಿ ಪರಿವರ್ತಿಸಲು ಅಂದಾಜು ಕರಡು ಕ್ರಿಯಾಯೋಜನೆ ಸಲ್ಲಿಕೆಯಾಗಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.
- 2025-26ನೇ ಸಾಲಿಗೆ ಮುಂದುವರೆದ ಯೋಜನೆಯಡಿ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳನ್ನು ಒಳಗೊಂಡಂತೆ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕೊಠಡಿಗಳ ದುರಸ್ತಿ

ಅವಶ್ಯಕತೆ ಇರುವ ಸರ್ಕಾರಿ ಶಾಲೆಗಳಿಗೆ ಒಟ್ಟು ರೂ.100.00ಕೋಟಿ ಅನುದಾನ ನಿಗಧಿಯಾಗಿದ್ದು, ಕ್ರಿಯಾಯೋಜನೆಯನ್ನು ಜಿಲ್ಲೆಗಳಿಂದ ಪಡೆಯಲಾಗುತ್ತಿದೆ.

**ಸಂಖ್ಯೆ: ಇಪಿ 231 ಯೋಸಕ 2025**

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು